# ದೀಪಾವಳಿ

ಕಾರ್ತಿಕ ಅಮವಾಸ್ಯೆಗೆ ಭಾರತದ ಪ್ರತಿಯೊಂದು ಮನೆಯಲ್ಲಿ ದೀಪಗಳನ್ನು ಬೆಳಗಿಸಿ ಅಬಾಲ ವೃದ್ಧರೂ ಸಂತೋಷ ಪಡುತ್ತಾರೆ. ಎಲ್ಲರೂ ತಮ್ಮ ತಮ್ಮ ಮನೆ, ಗುಡಿ ಗುಂಡಾರಗಳನ್ನು ಶುಚಿ ಗೊಳಿಸಿ, ಬಣ್ಣಗಳಿಂದ ಶೃಂಗರಿಸುತ್ತಾರೆ. ದೀಪಾವಳಿ ಭಾರತೀಯರ ಒಂದು ದೊಡ್ಡ ಹಬ್ಬ. 'ಅವಳಿ' ಎಂದರೆ ಮಾಲೆ, ಸಾಲು ಎಂದರ್ಥ. ಹಬ್ಬದ ದೃಷ್ಟಿಯಿಂದ ನೋಡಿದರೆ ದೀಪಾವಳಿ ದೀಪಗಳ ಸಾಲಿನಂತೆ ಹಬ್ಬಗಳ ಸಾಲೂ ಹೌದು. ನೀರು ತುಂಬುವ ಹಬ್ಬದಿಂದ ಆರಂಭವಾಗಿ ನರಕಚತುರ್ದಶಿ, ಧನತೇರಸ, ಬಲಿಪಾಡ್ಯಮಿ, ಭಾವನಬಿದಿಗೆ, ಅಕ್ಕನ ತದಿಗೆ, ಪಂಚಮಿಯ ವರೆಗೆಪ್ರತಿದಿನವೂ ಹಬ್ಬ. ವ್ಯಾಪಾರಸ್ಥರು ತಮ್ಮ ಹಳೆ ಖಾತೆಗಳನ್ನು ಮುಕ್ತಾಯ ಮಾಡಿ ಹೊಸ ಖಾತೆಯನ್ನು ಪ್ರಾರಂಭ ಮಾಡುತ್ತಾರೆ. ಧನ ದೇವತೆ 'ಲಕ್ಷ್ಮೀ' ಯನ್ನು ಇದೇ ಸಮಯದಲ್ಲಿ ಆವಾಹನೆ ಮಾಡಿ ಪೂಜಿಸಲಾಗುತ್ತದೆ.

ಈ ಹಬ್ಬವು ಹೇಗೆ ಮತ್ತು ಯಾವಾಗ ಪ್ರಾರಂಭವಾಯಿತು? ಈ ಬಗ್ಗೆ ಅನೇಕ ಪೌರಾಣಿಕ ಕಥೆಗಳು ಪ್ರಚಲಿತವಾಗಿವೆ. ದೈತ್ಯನಾದ ನರಕಾಸುರನ ಸಾಮ್ರಾಜ್ಯ ಇಡೀ ಸೃಷ್ಟಿಯ ಮೇಲೆ ಇತ್ತು. ಭಗವಂತನು ನರಕಾಸುರನ ವಧೆ ಮಾಡಿ, ಸೃಷ್ಟಿಯನ್ನು ಭಯಮುಕ್ತಗೊಳಿಸಿ, ದೇವತೆಗಳನ್ನು ಬಂಧಮುಕ್ತರನ್ನಾಗಿ ಮಾಡಿದನು. ಆದ್ದರಿಂದ ಈ ದಿನ 'ನರಕ ಚತುರ್ದಶಿ' ಎಂದು ಕರೆಯಲಾಗುತ್ತದೆ. ಎರಡನೇ ದಿನ 'ಅಮವಾಸ್ಯೆ'ಗೆ ದೀಪದಾನ, ದೀಪಾರಾಧನೆ ಮಾಡುತ್ತಾರೆ. ಇನ್ನೊಂದು ಕಥೆ, ದೈತ್ಯ ರಾಜಾ 'ಬಲಿ'ಯು ಇಡಿ ಭುಮಿಯ ಮೇಲೆ ತನ್ನ ರಾಜ್ಯವನ್ನು ಆಳುತ್ತಿದ್ದನು. ಆಸುರತೆಯ ಪ್ರಭಾವದಿಂದ ಧರ್ಮನಿಷ್ಠೆಯು ಸಮಾಪ್ತವಾಗಿತ್ತು. ಲಕ್ಷ್ಮೀ ಸಹಿತ ಸರ್ವ ದೇವಿ ದೇವತೆಯರನ್ನು ದೈತ್ಯ ರಾಜಾ 'ಬಲಿ' ತನ್ನ ಕಾರಾಗೃಹದಲ್ಲಿ ಬಂಧಿತನಾಗಿ ಇಟ್ಟುಕೊಂಡಿದ್ದನು. ಆಗ ಭಗವಂತನು 'ವಾಮನ' ರೂಪ ದಲ್ಲಿ ಬಂದು, 'ಬಲಿ' ರಾಜನ ಸಂಹಾರ ಮಾಡಿ, ದೇವತೆಗಳನ್ನು ನರಕಯಾತನೆ ಸದೃಷ್ಯ ಕಾರಾಗೃಹದಿಂದ ಮುಕ್ತ ಮಾಡಿದನು. ಇದಕ್ಕೆ ಪ್ರತಿಯಾಗಿ ಪ್ರತಿ ವರ್ಷ ದೀಪೋತ್ಸವನ್ನು ಆಚರಿಸಿ ಲಕ್ಷ್ಮೀಯ ಆವಾಹನೆ ಮಾಡುತ್ತಾರೆ.

ಮೇಲೆ ಕಾಣಿಸಿದ ಎರಡು ಕಥೆಗಳು ಲಾಕ್ಷಣಿಕ ಭಾಷೆಯ ರೂಪದಲ್ಲಿ ವರ್ಣನೆ ಮಾಡಲಾಗಿದೆ. ಜ್ಞಾನದ ದೃಷ್ಟಿಯಲ್ಲಿ ನೊಡಿದಾಗ 'ನರಕಾಸುರ' ಮಾಯೆ ಅಥವಾ ಮನೋವಿಕಾರಗಳ ರೂಪವಾಗಿದೆ. ಕಾಮ, ಕ್ರೋಧ, ಲೋಭ, ಮೋಹ, ಹಾಗೂ ಅಹಂಕಾರಗಳನ್ನು ಭಗವದ್ ಗೀತೆಯಲ್ಲಿ ನರಕದ ದ್ವಾರವೆಂದು ಮತ್ತು ಆಸುರಿ ಲಕ್ಷಣಗಳು ಎಂದು ಹೇಳಲಾಗಿದೆ. ಈ ವಿಕಾರಗಳನ್ನು ಜಯಿಸುವುದು ಕಠಿಣವಾಗಿರುವದರಿಂದ 'ಬಲಿ' ಎಂದು ಹೇಳಲಾಗಿದೆ. ವಿಶ್ವದ ಇತಿಹಾಸದಲ್ಲಿ ಕಲಿಯುಗದ ಅಂತಿಮ ಸಮಯವು ವಿಕಾರಿ ಸಾಮ್ರಾಜ್ಯದ ಸಮಯವಾಗಿದೆ. ಪ್ರತಿಯೊಬ್ಬ ನರ–ನಾರಿಯರ ಮನಸ್ಸಿನ ಮೇಲೆ ವಿಕಾರಗಳ ರಾಜ್ಯ ಇದೆ. ಇದಕ್ಕೆ ನರಕಾಸುರ ಅಥವಾ ರಾಜಾಬಲಿಯ ಅಧಿಪತ್ಯ ಎಂದು ಹೇಳಲಾಗುತ್ತದೆ. ಭಾರತವು ಆದಿಯಲ್ಲಿ ಸ್ವರ್ಗ ಆಗಿತ್ತು ಈಗ ಅದು ನರಕ ಸದೃಷ್ಯವಾಗಿದೆ. ಇಂದಿನ ಮಾನವರೆಲ್ಲರು ನಾವು 'ಬಲಿ'ಯ ಆಧೀನರಾಗಿದ್ದೇವೆ. ಆತ್ಮಜ್ಞಾನ ಹಾಗೂ ಭಗವಂತನ ಧ್ಯಾನದಿಂದ ನಾವು ಪುನಃ ಬಂಧನಮುಕ್ತರಾಗಲು ಸಾಧ್ಯವಿದೆ.

ಆತ್ಮಜ್ಞಾನ ಎಂದರೆ 'ನಾನು ಒಂದು ಜ್ಯೋತಿ, ಜಾತಿಇಲ್ಲದ ಆತ್ಮಜ್ಯೋತಿ. ಶರಿರದ ಹಣೆಯ ಮಧ್ಯದಲ್ಲಿ ಹೊಳೆಯುವ ಚೈತನ್ಯ ಜ್ಯೋತಿ, ದೇಹ ಎಂಬ ರಥದ ಸಾರಥಿ ನಾನು ಆತ್ಮ. ದೇಹದ ಮೂಲಕ ಈ ಸೃಷ್ಟಿ ನಾಟಕದಲ್ಲಿ ಪಾತ್ರ ಅಭಿನಯಿಸುವ ಪಾತ್ರಧಾರಿ ನಾನು. ಈ ರೀತಿ ನಿತ್ಯಚಿಂತನೆ ಮಾಡಬೇಕು. ಸರ್ವ ಆತ್ಮರ ತಂದೆಯೊಬ್ಬ, ಅವನೇ ನಿರಾಕಾರ ಶಿವನು, ಅವನೇ ಅಲ್ಲಾ, ಅವನೆ ಈಶ್ವರ ಅವನೇ ಗಾಡ್, ಓಂಕಾರನು, ದೇವನೊಬ್ಬ, ನಾಮ ಹಲವು ಭಾವ ಒಂದೇ, ಭಾಷೆ ಹಲವು, ನಮ್ಮಲ್ಲೇಕೆ ಭೇದವೂ. ನಾನು ಹಿಂದು, ನಾನು ಮುಸಲ್ಮಾನ, ಕ್ರೈಸ್ತರೆಂಬ ಭೇದವೂ. ನಾಳೆ ನಾಡನಾಳುವಂತಾ ಮಕ್ಕಳಲ್ಲಿ ಜಗಳವೂ. ಬ್ರಹ್ಮ, ವಿಷ್ಣು, ಬಸವ, ಏಸು, ನಾನಕ ಪೈಗಂಬರೆಲ್ಲ ಒಬ್ಬದೇವನ ಮಕ್ಕಳು ಸರ್ವಧರ್ಮವನ್ನು ಬಿಟ್ಟು, ದೇಹ ಧರ್ಮವನ್ನು ಸುಟ್ಟು, ನಿರಾಕಾರ ಜೋತಿರ್ಬಿಂದು ತಂದೆ ಶಿವನ ನೆನೆಸಿದಾಗ ಮುಕ್ತಿ ಮತ್ತು ಜೀವನಮುಕ್ತಿಯು ಪ್ರಾಪ್ತವಾಗುವುದು.

'ನರಕಾಸುರ' ಅಥವಾ 'ಬಲಿ' ರಾಜನ ಸಂಹಾರ ಅಂದರೆ ಆಸುರತ್ವದ ಪರಾಜಯ, ದೈವತ್ವದ ವಿಜಯದ ಸ್ಮರಣೊತ್ಸವವೇ ನಿಜವಾದ 'ದೀಪಾವಳಿ' ಯ ರಹಸ್ಯವಾಗಿದೆ. ಹಾಗಾಗಿ ಪ್ರತಿಯೊಬ್ಬರು ತಮ್ಮ ಮನೆಗಳನ್ನು, ಸುಣ್ಣ ಬಣ್ಣಗಳಿಂದ ಶುಚಿಗೊಳಿಸಿ, ದೀಪಾಲಂಕಾರವನ್ನು ಮಾಡುತ್ತಾರೆ. ಅದರ ಜೊತೆಗೆ ಮನಸ್ಸಿನಲ್ಲಿ ಇರುವ ಅಮವಾಸ್ಯೆಯ ಪ್ರತೀಕವಾದ ಅಜ್ಞಾನ ಅಂಧಕಾರವನ್ನು ದೂರ ಮಾಡಲು ಅಂತರ ಮನದಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗಿಸ ಬೇಕಾಗಿದೆ. ಆದ್ದರಿಂದಲೇ ಭಕ್ತರು ಭಗವಂತನ ಮುಂದೆ 'ಅಸತೋಮಾ ಸದ್ಗಮಯ ತಮಸೋಮಾ ಜ್ಯೋತಿರ್ಗಮಯಾ' ಎಂದು ಹಾಡುತ್ತಾರೆ. ದೀಪ ದಾನದ ಅರ್ಥವು ಜ್ಞಾನದಾನವೇ ಆಗಿದೆ.

ದೀಪಾವಳಿಯ ದಿನದಂದು ಹೊಸ ಬಟ್ಟೆಗಳನ್ನು ಧರಿಸುತ್ತಾರೆ, ಸಿಹಿಯನ್ನು ಹಂಚುತ್ತಾರೆ, ಹಳೆ ಖಾತೆಯನ್ನು ಸಮಾಪ್ತ ಮಾಡಿ ಹೊಸ ಖಾತೆಯನ್ನು ಶುರು ಮಾಡುತ್ತಾರೆ. ಇದರ ಜೊತೆ ಜೊತೆಗೆ ಹೊಸ ಭಾವ, ಮಧುರ ನುಡಿ, ಸ್ನೇಹ, ಪ್ರೀತಿಯ ಅವಶ್ಯಕತೆಯು ಇದೆ. ಬಾಪೂಜಿಯ ಕನಸಾದ ಸುಖ ಶಾಂತಿ ಸಮೃದ್ಧಿಯ 'ರಾಮರಾಜ್ಯ' ಆರಂಭದ ಸೂಚಕ ಸಹ ಇದಾಗಿದೆ.

*–ವಿಶ್ವಾಸ ಸೋಹೋನಿ. ಧಾಡಾಡ*

**- ब्रह्माकुमारीज् वार्ता फिचर्स**

www.bkvarta.com